1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.151/2023

ದಿಃ 21.12.2024

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-4 Pw-3

| | | |
|---|---|---|
| ಹೆಸರು | ಃ | ಗಂಗಾಧರಯ್ಯ ಬಿ |
| ತಂದೆಯ ಹೆಸರು | ಃ | ಬೋರಯ್ಯ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಲಕ್ಕಸಂದ್ರ,<br>ರಾಮನಗರ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಚಾಸಾ.1ರಿಂದ 3 ಮತ್ತು 6 ಗೊತ್ತು.

2. ಚಾಸಾ.1 ಮತ್ತು 2 ಹಿಂದೂ ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತಾರೆ.

3. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳು ಹಿಂದೂ ಮಡಿವಾಳ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

4. ಆರೋಪಿತರಿಗೆ ಚಾಸಾ.1 ಮತ್ತು 2 ಇವರ ಜಾತಿ ಗೊತ್ತು.

5. ಈ ಪ್ರಕರಣದಲ್ಲಿ ನನಗೆ ಯಾವ ಘಟನೆಯ ಕುರಿತು ಗೊತ್ತಿರುವುದಿಲ್ಲ.

6. ಪೊಲೀಸರು ನನ್ನನ್ನು ಯಾವ ಕಾಲಕ್ಕೂ ಯಾವುದೇ ರೀತಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಯಾವುದೇ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ.

7. ದಿಃ17.08.2023 ರಂದು ಚಾಸಾ.2 ಈತನ ತೋರಿಕೆಯ ಮೇರೆಗೆ ಪೊಲೀಸರು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

8. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.2(ಬಿ) ಎಂದು ಗುರುತಿಸಲಾಯಿತು.

9. ಆ ಸಮಯದಲ್ಲಿ ಚಾಸಾ.6 ಈತನೂ ಸಹ ಸ್ಥಳದಲ್ಲಿ ಹಾಜರಿದ್ದನು.

10. ಅದೇ ಸಮಯದಲ್ಲಿ ಪೊಲೀಸರು ಸದರಿ ಚಾಸಾ.2 ಈತನ ಒಡೆದ ಮೊಬೈಲ್‌ನ್ನು ತಮ್ಮ ವಶಕ್ಕೆ ಪಡೆದು, ಸ್ಥಳದಲ್ಲಿ 4 ವರ್ಣರಂಜಿತ ಛಾಯಾಚಿತ್ರಗಳನ್ನೂ ಸಹ ತೆಗೆಸಿರುತ್ತಾರೆ.

11. ಸದರಿ 4 ವರ್ಣರಂಜಿತ ಛಾಯಾಚಿತ್ರಗಳನ್ನು ಈಗ ನೋಡಿ ಗುರುತಿಸುತ್ತಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ನಿ.ಪಿ.3 ರಿಂದ 6 ಎಂದು ಗುರುತಿಸಿದ್ದು ಇರುತ್ತವೆ.

12. ಸದರಿ ಚಾಸಾ.2 ಈತನ ಒಡೆದ ಮೊಬೈಲ್‌ನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಿದ್ದು ಇರುತ್ತದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

13. ಈಗ ನನಗೆ ಓದಿ ಹೇಳಿದ ನಿ.ಪಿ.7 ರಂತೆ, "ದಿಃ15.08.2023 ರಂದದು ನಾನು ನಂಜೇಗೌಡನದೊಡ್ಡಿ ಬಯಲು ಕಡೆಗೆ ಹೋಗಿದ್ದು, ಅಲ್ಲಿಂದ ವಾಪಸ್ ಸಂಜೆ 5.00 ಗಂಟೆಯ

......................................

......................................

......................................

......................................

ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸುವ ವೇಳೆಯಲ್ಲಿ

ನಾನು ಹಾಜರಿದ್ದು ಪಂಚನಾಮೆಗೆ ಸಹಿ ಹಾಕಿರುತ್ತೇನೆ" ಎಂದು ದಿಃ17.08.2023 ರಂದು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆಂದು ಸೂಚಿಸುವುದು ಸರಿಯಲ್ಲ.

14. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಎಸ್.ಎಲ್., ವಕೀಲರಿಂದ ಆರೋಪಿಗಳ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಶ್ರೀ. ಹೆಚ್.ಸಿ.ಎನ್., ವಕೀಲರು ಸಮಯಾವಕಾಶ ಕೇಳಿರುತ್ತಾರೆ, ನ್ಯಾಯತಾದೃಷ್ಟಿಯಿಂದ ಪ್ರಸ್ತುತ ಸಾಕ್ಷಿಗೆ 500/- ರೂಪಾಯಿ ಸಾಕ್ಷಿ ಭತ್ಯೆ ನೀಡುವ ಕರಾರಿನ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.